4ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು

ಸಿ.ಸಿ ನಂ- 20544/2017 **ಚಾ.ಸಾ.-** 3 **ಅ.ಸಾ.-** 3

**ಪ್ರ.ವ.ಬೊ.** ದಿಃ 19.09.2019

ಸಾಕ್ಷಿದಾರನ ಹೆಸರು ಃ ಹನುಮಂತಪ್ಪ

ತಂದೆಯ ಹೆಸರು ಃ ನಂಜಪ್ಪ

ವಯಸ್ಸು ಃ 64 ವರ್ಷ

ಕೆಲಸ ಃ ದೇವಸ್ಥಾನದ ಸಹಾಯಕರು

ವಾಸ ಃ ಸಾರಕ್ಕಿ ಗೇಟ್, ಬೆಂಗಳೂರು

ಮುಖ್ಯ ವಿಚಾರಣೆ ಹಿ.ಸಾ.ಸ.ಅ ರವರಿಂದಃ

ನಾನು 1988 ರಿಂದ ಬನಶಂಕರಿ ದೇವಸ್ಥಾನದಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ದಿನನಿತ್ಯ ಬೆಳಿಗ್ಗೆ 6.00 ಗಂಟೆಗೆ ದೇವಸ್ಥಾನಕ್ಕೆ ಹೋಗುತ್ತೇನೆ. ಪ್ರತಿದಿನ 2ನೇ ಆರೋಪಿ ದೇವಸ್ಥಾನದ ಬಾಗಿಲನ್ನು ತೆರೆಯುತ್ತಾರೆ. ಘಟನೆ ನಡೆದ ಮರುದಿನ ನಾನು ಬೆಳಿಗ್ಗೆ ದಿನನಿತ್ಯದಂತೆ ದೇವಸ್ಥಾನಕ್ಕೆ ಹೋದಾಗ 2ನೇ ಆರೋಪಿ ನನ್ನನ್ನು ಕರೆದು ನಾನು ದೇವರ ವಿಗ್ರಹ ಸ್ವಚ್ಚಗೊಳಿಸುವ ಸಮಯದಲ್ಲಿ ಕಿರೀಟ ಮತ್ತು ಪಾದುಕೆ ಭಾಗದ ಬಂಗಾರವನ್ನು ಯಾರೋ ಕಟ್ ಮಾಡಿ ತೆಗೆದಿದ್ದಾರೆ ಎಂದು ಹೇಳಿದರು. ಅದನ್ನು ನಾನು ನೋಡಿರುತ್ತೇನೆ. ಘಟನೆ ನಡೆದ ಹಿಂದಿನ ದಿನ ದೇವಸ್ಥಾನದ ಬಾಗಿಲನ್ನು ಸತೀಶ್‌ರವರು ಹಾಕಿ ಹೋಗಿರಬಹುದು. ನಂತರ ನಾನು ಪ್ರಾ.ಸಾ.1 ರವರಿಗೆ ದೂರವಾಣಿ ಕರೆ ಮಾಡಿ ತಿಳಿಸಿದ್ದು, ದೇವಸ್ಥಾನದ ಕಮಿಟಿಯವರು ಮತ್ತು ಪ್ರಾ.ಸಾ.1 ರವರು ಸ್ಥಳಕ್ಕೆ ಬಂದಿದ್ದು ನಂತರ ಪ್ರಾ.ಸಾ.1 ರವರು ಪೊಲೀಸ್ ಠಾಣೆಗೆ ದೂರು ಕೊಟ್ಟಿರುತ್ತಾರೆ. ಸಾಕ್ಷಿ ನಿ.ಪಿ.2 ರಲ್ಲಿರುವ ತಮ್ಮ ಸಹಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ನಿ.ಪಿ.2 ಕ್ಕೆ ಬೆಂಗಳೂರಿನ ಬನಶಂಕರಿ ದೇವಸ್ಥಾನದಲ್ಲಿ 2015 ರಲ್ಲಿ ದೇವರಿಗೆ ಹಾಕಿದ್ದ ಕಿರೀಟ ಮತ್ತು ಪಾದುಕೆಯ ಚಿನ್ನವನ್ನು ಕಟ್ ಮಾಡಿ ಸುಮಾರು 7 ಗ್ರಾಂ ಚಿನ್ನ

ಕಳುವಾದ ಹಿನ್ನಲೆಯಲ್ಲಿ ನಿ.ಪಿ.2 ರ ವಿಚಾರ ತಿಳಿದು ಸಹಿ ಮಾಡಿದ್ದೇನೆ. ಈ ಬಗ್ಗೆ ಹೇಳಿಕೆ ನೀಡಿದ್ದೇನೆ. ಕಳ್ಳತನ ಯಾರು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಹಿ.ಸ.ಸ.ಅ ರವವರು ಅನುಮತಿಕೋರಿದ್ದು, ಅನುಮತಿ ನೀಡಲಾಗಿದೆ.)

ಪಾಟೀ ಸವಾಲು ಹಿ.ಸ.ಸ.ಆ ರವರಿಂದಃ

ಘಟನೆ ನಡೆದ ಹಿಂದಿನ ದಿನ ಒಂದನೇ ಆರೋಪಿ ಬಾಗಿಲು ಹಾಕಿ ಹೋಗಿದ್ದರು ಎಂದು ನಾನು ನೋಡಿಲ್ಲ. ದೇವಸ್ಥಾನದಲ್ಲಿ ಪ್ರತಿದಿನ ಬೆಳ್ಳಿಯ ಒಡವೆಗಳು ಮತ್ತು ಹೂವಿನ ಅಲಂಕಾರ ಮಾಡುತ್ತಾರೆ ಎಂದರೆ ಸರಿ. ಪ್ರತಿದಿನ ದೇವಸ್ಥಾನದ ಅರ್ಚಕರು ಪೂಜೆ ಮುಗಿದ ನಂತರ ದೇವರಿಗೆ ಹಾಕಿದ್ದ ಒಡವೆಗಳನ್ನು ತೆಗೆದು ಗರ್ಭಗುಡಿಯಲ್ಲಿರುವ ಟ್ರಂಕ್‌ನಲ್ಲಿ ಬಟ್ಟೆ ಸುತ್ತಿ ಇಡುವುದು ವಾಡಿಕೆ ಎಂದರೆ ಸರಿ. ತುಂಬಾ ವಿಶೇಷ ಒಡವೆಗಳನ್ನು ವಿಶೇಷ ಪೂಜೆ ದಿನಗಳಂದು ಮಾತ್ರ ಧರಿಸುತ್ತಾರೆ ಎಂದರೆ ಸರಿ. ಉಳಿದ ಸಮಯದಲ್ಲಿ ಒಡವೆಗಳು ಪ್ರಾ.ಸಾ.1 ರವರ ಅಭಿರಕ್ಷೆಯಲ್ಲಿ ಇರುತ್ತದೆ ಎಂದರೆ ಸರಿ. ವಿಶೇಷ ಸಂದರ್ಭಗಳಲ್ಲಿ ಪ್ರಧಾನ ಅರ್ಚಕರು, ಅರ್ಚಕರು, ಪರಿಚಾರಕರು ಹೋಗಿ ಅವುಗಳನ್ನು ಪಡೆದು ಲೆಡ್ಜರ್‌ನಲ್ಲಿ ಸಹಿ ಮಾಡಿ, ಅವುಗಳನ್ನು ದೇವಿಗೆ ತೊಡಿಸಿ ಜಾತ್ರಾ ಮಹೋತ್ಸವ ಮುಗಿದ ನಂತರ ಅವುಗಳನ್ನು ಮತ್ತೆ ತೆಗೆದು ಕಾರ್ಯನಿರ್ವಾಹಕರಿಗೆ ಕೊಡುವುದು ಪದ್ಧತಿ ಎಂದರೆ ಸರಿ. ಈ ಕೃತ್ಯ ನಡೆದ ಸಂದರ್ಭ ಶತಮಾನೋತ್ಸವ ಕಾರ್ಯಕ್ರಮ ಇದ್ದು, ಪ್ರಧಾನ ಅರ್ಚಕರಾದ ಸತ್ಯನಾರಾಯಣಶಾಸ್ತ್ರಿ, ಅರ್ಚಕರಾದ 2ನೇ ಆರೋಪಿ, ಸಹಾಯಕ ಅರ್ಚಕರಾದ 2ನೇ ಆರೋಪಿ, ಸತೀಶ್ ಮತ್ತು ಪರಿಚಾರಕರಾದ ಒಂದನೇ ಆರೋಪಿ ವಿಶೇಷ ಆಭರಣಗಳನ್ನು ಪ್ರಾ.ಸಾ.1 ರವರಿಂದ ಪಡೆದು, ಲೆಡ್ಜರ್‌ನಲ್ಲಿ ಸಹಿ ಮಾಡಿ, ನಂತರ ಅವುಗಳನ್ನು ಬನಶಂಕರಿ ದೇವಿಗೆ ತೊಡಿಸಿ ಸಮಾರಂಭ ಮುಗಿದ ಮೇಲೆ ದೇವಿಗೆ ತೊಡಿಸಿದ ಒಡವೆಗಳನ್ನು ತೆಗೆದು ಪ್ರಾ.ಸಾ.1 ರವರಿಗೆ ಕೊಡಬೇಕಾಗಿದ್ದು, ಆದರೆ ಇವರುಗಳು ಒಡವೆಗಳನ್ನು ವಾಪಸ್ಸು ಕೊಡದೇ ಗರ್ಭಗುಡಿಯಲ್ಲಿನ ಲಾಕರ್‌ನಲ್ಲಿಟ್ಟು, ಅದರ ಕೀಯನ್ನು

ಅಲ್ಲಿಯೇ ಇಟ್ಟು, ಬೇಜವಾಬ್ದಾರಿತನ ತೋರಿರುತ್ತಾರೆ ಎಂದರೆ ಸರಿ. ಆ ದಿನ ಒಂದನೇ ಆರೋಪಿ ಪ್ರಾ.ಸಾ.1 ಅಥವಾ ಪ್ರಧಾನ ಅರ್ಚಕರ ಅನುಮತಿ ಇಲ್ಲದೇ ಸದರಿ ಒಡವೆಗಳನ್ನು ದೇವಿಗೆ ಧರಿಸಿದ್ದು, ಆ ದಿನ ಅವುಗಳನ್ನು ತೆಗೆಯದೇ ಹೋಗಿ ಬೆಳಿಗ್ಗೆ 2 ನೇ ಆರೋಪಿ ಅಲಂಕಾರವನ್ನು ತೆಗೆಯುವಂತೆ ಹೇಳಿದ್ದು ಅನುಮಾನಕ್ಕೆ ಎಡವು ಮಾಡಿಕೊಟ್ಟಿತ್ತು ಎಂದರೆ ಸರಿ. ಈ ಎಲ್ಲಾ ವಿಚಾರಗಳನ್ನು ನಾನು ತನಿಖಾಧಿಕಾರಿಗೆ ಹೇಳಿಕೆ ಕೊಡುವಾಗ ಹೇಳಿದ್ದೇನೆ ಎಂದರೆ ಸರಿ.

ಪಾಟೀ ಸವಾಲು ಶ್ರೀ ಸಿ.ಎನ್ ಒಂದನೇ ಆರೋಪಿ ಪರ ವಕೀಲರಿಂದಃ

ಮಹಜರ್ ಮಾಡಿದ ದಿನಾಂಕ ಮತ್ತು ತಿಂಗಳು ನೆನಪಿಲ್ಲ. ನಾನು 1988 ನೇ ಇಸವಿಯಿಂದ ಬನಶಂಕರಿ ದೇವಸ್ಥಾನದಲ್ಲಿ ಕೆಲಸ ಮಾಡುತ್ತಿದ್ದೇನೆ. ನಿ.ಪಿ.2 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಪೊಲೀಸರ ಒತ್ತಾಯದ ಮೇರೆಗೆ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಸಮಯದಲ್ಲಿ ಪ್ರಾ.ಸಾ.1 ರವರು ಇದ್ದರು. ಮಹಜರ್ ಮಾಡಲು 3 ಜನ ಪೊಲೀಸರು ಬಂದಿದ್ದು, ಅವರ ಹೆಸರು ಗೊತ್ತಿಲ್ಲ. ಪಂಚನಾಮೆಯನ್ನು ಪೊಲೀಸರು ಬರೆದಿದ್ದರು, ಅವರ ಹೆಸರು ಗೊತ್ತಿಲ್ಲ. ಪೊಲೀಸರು ಮತ್ತು ಪ್ರಾ.ಸಾ.1 ಬಿಟ್ಟು ಬೇರೆ ದೇವಸ್ಥಾನದ ಸಿಬ್ಬಂದಿಯವರು ಇದ್ದರು. ಆ ದಿನ ನಾನು ಸ್ಥಳದಲ್ಲಿ ಇರಲಿಲ್ಲ ಹಾಗೂ ಪಂಚನಾಮೆಗೆ ಸ್ಥಳದಲ್ಲಿ ಸಹಿ ಹಾಕಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಷಯದ ಬಗ್ಗೆ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ಮಾಡುವಾಗ ನಾನು ಒಂದೇ ಸಹಿ ಹಾಕಿದ್ದೆ. ಘಟನೆ ದಿಃ 20.06.2015 ರಂದು ಆಗಿತ್ತು ಎಂದರೆ ಸರಿ. ಆ ದಿನ ನಾನು ಇನ್ನೊಂದು ಕಡೆ ಇದ್ದೆ. ದೇವಸ್ಥಾನದ ಕಾಂಪೌಂಡ್ ಒಳಗಡೆ ಇದ್ದೆ. ನನಗೆ ಪ್ರಥಮವಾಗಿ 2ನೇ ಆರೋಪಿ ಮಾಹಿತಿ ಕೊಟ್ಟಿದ್ದರು. ಅವರು ಮಾಹಿತಿ ಕೊಟ್ಟ ನಂತರ ಗರ್ಭಗುಡಿ ಒಳಗೆ ಹೋಗಿ ನೋಡಿದ್ದೆ. ಪಂಚನಾಮೆ ಸಮಯದಲ್ಲಿ ಹೊರತುಪಡಿಸಿ ನಂತರ ಪೊಲೀಸರು ನನ್ನ ಹೇಳಿಕೆ ಪಡೆದಿಲ್ಲ. ನನ್ನ ಹೇಳಿಕೆಗೆ ನಾನು ಸಹಿ ಮಾಡಿಲ್ಲ. ಹೇಳಿಕೆಯಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿ. ಅರ್ಚಕರು ತಂದು ಕೊಟ್ಟು, ಗರ್ಭಗುಡಿ ಟ್ರಂಕ್‌ನಲ್ಲಿ ಇಟ್ಟರೆ ಮಾತ್ರ ಪ್ರಾ.ಸಾ.1 ರವರ ಜವಾಬ್ದಾರಿ ಇರುತ್ತದೆ. ಪ್ರಾ.ಸಾ.1 ರವರ ನಿರ್ಲಕ್ಷತೆ ಎಂದರೆ ಸರಿ. ಆದರೆ ಆ ವಸ್ತುಗಳು

ಅವರಿಗೆ ಹಸ್ತಾಂತರಿಸಿದರೆ ಮಾತ್ರ ಜವಾಬ್ದಾರಿ ಬರುತ್ತದೆ. ಅರ್ಚಕರು ಕೊಡಲು ಬಂದರೆ ಪ್ರಾ.ಸಾ.1 ರವರು ಅದನ್ನು ತೆಗೆದುಕೊಳ್ಳಬೇಕು ಎಂದರೆ ಸರಿ. ಅವರು ಪಡೆಯದೇ ಇದ್ದರೆ ಅರ್ಚಕರು ಅದನ್ನು ಗರ್ಭಗುಡಿಯಲ್ಲಿ ಇಡುತ್ತಾರೆ. ಒಡವೆಗಳನ್ನು ಕೊಡುವಾಗ ಮತ್ತು ತೆಗೆದುಕೊಳ್ಳುವಾಗ ನನ್ನನ್ನೇ ಕರೆದುಕೊಂಡು ಹೋಗಬೇಕು, ಆ ಸಮಯದಲ್ಲಿ ಅರ್ಚಕರು ಕೊಟ್ಟಿರುವುದಿಲ್ಲ.

2ನೇ ಆರೋಪಿ ಪರ ಜಿ.ಜಿ ವಕೀಲರಿಂದ ಪಾಟೀ ಸವಾಲುಃ

ಬನಶಂಕರಿ ದೇವಸ್ಥಾನದಲ್ಲಿ ನಾನು ಕೆಲಸ ಮಾಡುತ್ತಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಕೊಟ್ಟಿಲ್ಲ. ಘಟನೆ ನಡೆದ ದಿನದ ಹಿಂದೆ ಪ್ರಧಾನ ಅರ್ಚಕರು ಸತ್ಯನಾರಾಯಣ ಶಾಸ್ತ್ರಿ ಇದ್ದರು. ಪ್ರಾ.ಸಾ.1 ರವರ ಬಳಿ ನನಗೆ ಸತ್ಯನಾರಾಯಣ ಶಾಸ್ತ್ರಿಯವರು ಕರೆದುಕೊಂಡು ಹೋಗಿದ್ದರು. ಯಾರು ಬಂಗಾರವನ್ನು ತಂದಿದ್ದರು, ಅವರೇ ಆ ಆಭರಣಗಳನ್ನು ವಾಪಸ್ಸು ಕೊಡುವ ಜವಾಬ್ದಾರಿ ಇತ್ತು ಎಂದರೆ ಸರಿ. ಯಾವ ದಿನಾಂಕದಂದು ಸತ್ಯನಾರಾಯಣಶಾಸ್ತ್ರಿಯವರು ಆಭರಣಗಳನ್ನು ಪಡೆದಿದ್ದರು ಎಂದು ಗೊತ್ತಿಲ್ಲ. ಘಟನೆ ನಡೆಯುವ ದಿನಕ್ಕೆ ಮತ್ತು ಸತ್ಯನಾರಾಣಯ ಶಾಸ್ತ್ರಿ ಆಭರಣ ಪಡೆಯುವ ದಿನಕ್ಕೆ ಒಂದೂವರೆ ತಿಂಗಳು ಅಂತರ ಇದೆ. ಆಭರಣಗಳನ್ನು ಇಷ್ಟೇ ದಿನದಲ್ಲಿ ವಾಪಸ್ಸು ಕೊಡಬೇಕು ಎಂದಿಲ್ಲ, ಕಾರ್ಯಕ್ರಮ ಮುಗಿದ ನಂತರ ಕೊಡಬೇಕು. ಅದನ್ನು ವಾಪಸ್ಸು ಕೊಡುವ ಜವಾಬ್ದಾರಿ ಪ್ರಧಾನ ಅರ್ಚಕರಾದ ಸತ್ಯನಾರಾಯಣ ಶಾಸ್ತ್ರಿಯವರದ್ದು ಎಂದರೆ ಸರಿ. 15 ದಿನಗಳಲ್ಲಿ ಸತ್ಯನಾರಾಯಣ ಶಾಸ್ತ್ರಿಯವರು ವಾಪಸ್ಸು ಕೊಟ್ಟಿಲ್ಲ ಎಂದು ಅವರಿಗೆ ನೋಟೀಸ್ ಕೊಟ್ಟಿಲ್ಲ. ಸತ್ಯನಾರಾಯಣ ಶಾಸ್ತ್ರಿಯವರು ಸಹಿ ಪಡೆದು ಆಭರಣಗಳನ್ನು ಪಡೆದಿದ್ದರಿಂದ ಅದನ್ನು ಅವರು ವಾಪಸ್ಸು ಕೊಡದೇ ಇದ್ದ ಕಾರಣ ಪ್ರಾ.ಸಾ.1 ರವರ ಬೇಜವಾಬ್ದಾರಿತನ ಬರುವುದಿಲ್ಲ. ಸತ್ಯನಾರಾಯಣ ಶಾಸ್ತ್ರಿಯವರು ಆಭರಣಗಳನ್ನು ವಾಪಸ್ಸು ಕೊಡದೇ ಅವರೂ ಸಹ ನಿರ್ಲಕ್ಷತನ ತೋರಿಸಿದ್ದಾರೆ ಎಂದರೆ ಸರಿ. ನಾನು ಪೊಲೀಸರಿಗೆ ದೂರು ಕೊಟ್ಟಿಲ್ಲ. 2ನೇ ಆರೋಪಿ ಯಾವ ದಿನಾಂಕದಂದು ನನಗೆ ಘಟನೆ ಬಗ್ಗೆ ತಿಳಿಸಿದ್ದು ಎಂದು ದಿನಾಂಕ ನೆನಪಿಲ್ಲ. ಯಾವ ರೀತಿ ಕಳ್ಳತನ ಆಯಿತು ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ

ಎಂದರೆ ಸರಿ. ಪಂಚನಾಮೆ ಇದೇ ರೀತಿ ಬರೆಯಲು ನಾನು ಪೊಲೀಸರಿಗೆ ಮಾಹಿತಿ ಕೊಟ್ಟಿಲ್ಲ. ಪಂಚನಾಮೆಯನ್ನು ನಾನು ಓದಿ ನೋಡಿಲ್ಲ. ಪಂಚನಾಮೆಯನ್ನು ನನಗೆ ಬೇರೆ ಯಾರು ಓದಿ ಹೇಳಿಲ್ಲ. ಪಂಚನಾಮೆಯಲ್ಲಿ ಬರೆದ ವಿಷಯ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

ಉಳಿದ ಪಾಟೀ ಸವಾಲು 1ನೇ ಆರೋಪಿ ಪರ ಮೇಲೆ ಹೇಳಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು